ಓ.ಎಸ್.ನಂಃ 250/2023

ಪಿಡಬ್ಲ್ಯೂ-1

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 14.01.2026 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ</u>**

ನಾನು 9ನೇ ತರಗತಿ ಓದಿದ್ದೇನೆ. ನನಗೆ ಓದು ಬರಹ ಬರುತ್ತದೆ. ಒಪ್ಪಂದ ಪತ್ರದ ದಿನಾಂಕ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು 2009 ರಲ್ಲಿ ಒಪ್ಪಂದ ಪತ್ರ ಆಗಿದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಮತ್ತು ನಾನು ಒಂದೇ ಕುಟುಂಬದವರು ಎಂದರೆ ಸರಿ. 1ನೇ ಪ್ರತಿವಾದಿಯ ಗಂಡ ನನ್ನ ಸಹೋದರ ಸಂಬಂಧಿ ಎಂದರೆ ಸರಿ. 1ನೇ ಪ್ರತಿವಾದಿಯ ಗಂಡನ ತಂದೆ ಹೆಸರು ಎಸ್.ಪುಟ್ಟಯ್ಯ. ಸದರಿ ಪುಟ್ಟಯ್ಯನಿಗೆ ನಾಲ್ಕು ಜನ ಮಕ್ಕಳು. ಅವರ ಹೆಸರು ಮಹದೇವಯ್ಯ, ಸಿದ್ದರಾಜು, ಶಿವಣ್ಣ ಮತ್ತು ರತ್ನಮ್ಮ. ಅದರಲ್ಲಿ 1ನೇ ಪ್ರತಿವಾದಿಯ ಗಂಡ ಮರಣ ಹೊಂದಿದ್ದಾರೆ. ಸಿದ್ದರಾಜು ಗ್ರಾಮವನ್ನು ಬಿಟ್ಟು ಹೋಗಿದ್ದಾರೆ. ಇನ್ನೂ ಪತ್ತೆಯಾಗಿಲ್ಲ. ಶಿವಣ್ಣ ಮೃತ ಹೊಂದಿದ್ದಾರೆ. ರತ್ನಮ್ಮ ಗಂಡನ ಮನೆಯಲ್ಲಿ ಇದ್ದಾರೆ. ಎಸ್.ಪುಟ್ಟಯ್ಯರವರ ಎರಡನೇ ಮಗ ಸಿದ್ದರಾಜುರವರಿಗೆ ಮದುವೆಯಾಗಿತ್ತು. ಆತನ ಹೆಂಡತಿ ಮತ್ತು ಮಕ್ಕಳು ಬದುಕಿದ್ದಾರೆ. ಶಿವಣ್ಣರವರ ಹೆಂಡತಿ ಮತ್ತು ಮಕ್ಕಳು ಇದ್ದಾರೆ.

ನಾನು ಮಾಡಿಕೊಂಡ ಒಪ್ಪಂದ ಪತ್ರವನ್ನು ಹಾಜರುಪಡಿಸಿದ್ದೇನೆ. ಸದರಿ ಒಪ್ಪಂದದ ಪತ್ರದಲ್ಲಿ ಅದಲು ಬದಲು ಮಾಡಿಕೊಂಡ ಸ್ವತ್ತುಗಳ ಸಂಖ್ಯೆ ನನಗೆ ನೆನಪಿಲ್ಲ. ಅಸ್ಸೆಸ್ಮೆಂಟ್ 71 ರಲ್ಲಿ 5 ಅಂಕಣ ಈ ಹಿಂದೆ ಎಸ್.ಪುಟ್ಟಯ್ಯರವರ ಹೆಸರಿನಲ್ಲಿ ಇತ್ತು. ಇಂದಿಗೂ ಸಹ ಸದರಿ ಸ್ವತ್ತು ಎಸ್. ಪುಟ್ಟಯ್ಯರವರ ಹೆಸರಿನಲ್ಲಿ ಪಂಚಾಯಿತಿ ದಾಖಲೆಗಳಲ್ಲಿ ನಮೂದು ಇದೆ ಎಂದರೆ ಸರಿ. ಸದರಿ ಎಸ್.ಪುಟ್ಟಯ್ಯ ಮರಣ ಹೊಂದಿದ ನಂತರ 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಖಾತಾ ಆಗಿಲ್ಲ ಎಂದರೆ ಸರಿ. ಸದರಿ ಒಪ್ಪಂದದ ಪತ್ರವನ್ನು ನೋಂದಾಯಿಸಿಲ್ಲ. ಒಪ್ಪಂದ ಪತ್ರದ ಛಾಪಾ ಕಾಗದವನ್ನು ಎಲ್ಲಿ ಖರೀದಿ ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಒಪ್ಪಂದ ಪತ್ರವನ್ನು ಎಲ್ಲಿ ಬೆರಳಚ್ಚು ಮಾಡಲಾಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಒಪ್ಪಂದ ಪತ್ರದ ಛಾಪಾ ಕಾಗದವನ್ನು ಸರ್ಕಾರದವರು 2003 ರಲ್ಲಿ ನಿಷೇಧಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

ಎಸ್.ಪುಟ್ಟಯ್ಯರವರ ಹೆಸರಿನಲ್ಲಿ ದಾವಾ ಸ್ವತ್ತು ಇಂದಿಗೂ ಖಾತಾ ನಮೂದಾಗಿದ್ದು, ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಎಸ್.ಪುಟ್ಟಯ್ಯ ರವರ ಸ್ವತ್ತಿನಲ್ಲಿ ಆತನ ಎಲ್ಲಾ ಮಕ್ಕಳಿಗೂ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ನಾನು ಒಪ್ಪಂದ ಮಾಡಿಕೊಳ್ಳುವ ಕಾಲಕ್ಕೆ ಸದರಿ ಸ್ವತ್ತು 1ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ದಾಖಲಾಗಿತ್ತು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಗಂಡನಿಗೆ ಸದರಿ ಸ್ವತ್ತಿನ ಮೇಲೆ ಸಂಪೂರ್ಣ ಹಕ್ಕು ಇಲ್ಲದಿದ್ದರು ನಾನು ಒಪ್ಪಂದ ಪತ್ರ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಎಸ್.ಪುಟ್ಟಯ್ಯರವರ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ನನಗೂ ದಾವಾ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ